# <u>ಆರ್‌ಟಿಇ ನ್ಯೂ ಸಾಫ್ಟ್‌ವೇರ್–2015</u>

## <u>ಆರ್‌ಟಿಇ ಅಡಿಯಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ಕ್ರಮಗಳು</u>

1. ಪೋಷಕರು/ಸಾರ್ವಜನಿಕರು ಅರ್ಜಿ ಸಲ್ಲಿಸುವಾಗ ಸರಿಯಾದ ಮಾಹಿತಿಯನ್ನು ನೀಡುವುದು. ತಪ್ಪು ಮಾಹಿತಿ ನೀಡಿದ್ದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
2. ಅರ್ಜಿ ಸಲ್ಲಿಸುವಾಗ ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಿ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸುವಂತಿಲ್ಲ ಹಾಗೂ ಅರ್ಜಿ ಸಲ್ಲಿಸುವಾಗ ಮೊಬೈಲ್ ನಂಬರ್ ಕಡ್ಡಾಯಗೊಳಿಸಲಾಗಿದೆ.
3. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ತಂತ್ರಾಂಶ ನೀಡುವ ಅರ್ಜಿ ಸಂಖ್ಯೆಯನ್ನು ದಾಖಲು ಮಾಡಿಕೊಳ್ಳಬೇಕು ಮುಂದಿನ ಎಲ್ಲಾ ವಿವರಗಳಿಗೂ ಅರ್ಜಿ ಸಂಖ್ಯೆ ಮತ್ತು ಮೊಬೈಲ್ ನಂಬರ್‌ನ್ನು ಬಳಸಬೇಕಾಗುತ್ತದೆ.
4. **ಆರ್‌ಟಿಇ ನ್ಯೂ ಸಾಫ್ಟ್‌ವೇರ್–2015** ತಂತಾಂಶವನ್ನು **ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ, ನವದೆಹಲಿ** ರವರು ಅಭಿವೃದ್ಧಿ ಪಡಿಸಿರುವ DISE ತಂತ್ರಾಂಶಕ್ಕೆ ಅಳವಡಿಸಬೇಕಾಗಿರುವುದರಿಂದ ಅರ್ಜಿ ಸಲ್ಲಿಸುವಾಗ ಮಾಹಿತಿಯನ್ನು ಆಂಗ್ಲ ಭಾಷೆಯನ್ನು ಬಳಸಬೇಕಾಗಿರುತ್ತದೆ.
5. ಅರ್ಜಿಯನ್ನು ಸಲ್ಲಿಸುವಾಗ ಹೆಚ್ಚಿನ ಪ್ರಮಾಣದಲ್ಲಿ ಆಯ್ಕೆ ಮಾಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
6. ಈ ತಂತ್ರಾಂಶ INTERNET EXPLORER/MOZILLA web browser ಗಳಲ್ಲಿ ಸುಲಭವಾಗಿ ಬಳಸಬಹುದಾಗಿದೆ ಹಾಗೂ ಇತರೆ ಬ್ರೋಸರ್‌ಗಳನ್ನು ಬಳಸಿದಲ್ಲಿ setting/option ನಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ.
7. ಗ್ರಾಮೀಣ ಪ್ರದೇಶದಲ್ಲಿ ಕಂದಾಯ ಗ್ರಾಮ ಹಾಗೂ ನಗರ ಪ್ರದೇಶಗಳಲ್ಲಿ ವಾರ್ಡ್‌ನಲ್ಲಿ ಇರುವ ಶಾಲೆಗಳನ್ನು ನೆರೆಹೊರೆ ಶಾಲೆಗಳೆಂದು ಗುರುತಿಸಲಾಗಿದೆ. ಈ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್‌ನ ನಮೂನೆ 1,2,3 ಮತ್ತು 4ರಲ್ಲಿ ಪಡೆಯಬಹುದಾಗಿದೆ.
8. ಅನುದಾನರಹಿತ ಶಾಲೆಗಳ ಪಟ್ಟಿಯನ್ನು ಮಾತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿರುತ್ತದೆ.
9. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಆಂಗ್ಲ ಭಾಷೆಯ (CAPITAL) ಅಕ್ಷರಗಳನ್ನು ಸಂಬಂಧಿಸಿದ ಕಾಲಂಗಳಲ್ಲಿ ಭರ್ತಿ ಮಾಡುವುದು. ಕೆಲವು ಕಾಲಂಗಳಲ್ಲಿ ಆಯ್ಕೆ ಅವಕಾಶ ಇದ್ದು, ಸರಿಯಾದ ಮಾಹಿತಿಯನ್ನು ಮಾತ್ರ ಆಯ್ಕೆ ಮಾಡುವುದು, ತಪ್ಪು ಆಯ್ಕೆ ಮಾಡಿದಲ್ಲಿ ಮುಂದಿನ ಹಂತದಲ್ಲಿ ಬದಾಲಾವಣೆ ಮಾಡಲು ಅವಕಾಶ ಇರುವುದಿಲ್ಲ.
10. ತಂದೆ/ತಾಯಿ ಅಥವಾ ಪೋಷಕರು ಅರ್ಜಿ ಸಲ್ಲಿಸುವಾಗ ಪ್ರಸ್ತುತ ವಾಸವಿರುವ ವಿಳಾಸವನ್ನು ನೀಡುವುದು. ಹಾಗೂ ಶೈಕ್ಷಣಿಕ ಜಿಲ್ಲೆ, ಶೈಕ್ಷಣಿಕ ವಲಯ/ತಾಲ್ಲೂಕು ಅನ್ನು ಆಯ್ಕೆ ಮಾಡುವುದು.
11. ತಂದೆ/ತಾಯಿ ಅಥವಾ ಪೋಷಕರು ವಾಸವಿರುವ ಕಂದಾಯ ಗ್ರಾಮ/ವಾರ್ಡ್ ಸರಿಯಾಗಿ ಆಯ್ಕೆ ಮಾಡುವುದು. ಇದರ ಆಧಾರದ ಮೇಲೆ ಶಾಲೆಗಳ ಪಟ್ಟಿ ಲಭ್ಯವಿರುತ್ತದೆ.
12. ಶಾಲೆಗಳನ್ನು ಆಯ್ಕೆ ಮಾಡುವಾಗ ಕಂದಾಯ ಗ್ರಾಮ ಅಥವಾ ವಾರ್ಡ್‌ನಲ್ಲಿ ಲಭ್ಯವಿರುವ ಗರಿಷ್ಠ ಐದು ಶಾಲೆಗಳನ್ನು ಆದ್ಯತೆ ಮೇಲೆ ಆಯ್ಕೆ ಮಾಡುವ ಅವಕಾಶವಿರುತ್ತದೆ.

13. ಅರ್ಜಿ ಸಲ್ಲಿಸುವಾಗ ಮೂಲ ದಾಖಲೆಗಳ ಸಂಖ್ಯೆ ಹಾಗೂ ದಿನಾಂಕ(Reference Number) ದಾಖಲಿಸುವುದು.
14. ವಿದ್ಯಾರ್ಥಿ/ವಿದ್ಯಾರ್ಥಿನಿಯ ಬಾವಚಿತ್ರವನ್ನು SCAN ಮಾಡಿದ ನಂತರ JPEG ಗೆ ಪರಿವರ್ತಿಸಿ ಅಪ್‌ಲೋಡ್ ಮಾಡುವುದು (ಬಾವಚಿತ್ರ ಪಾಸ್ ಪೋರ್ಟ್ ಸೈಜಿನದಾಗಿದ್ದು, 10KB ದಿಂದ 15KB ಒಳಗಿರಬೇಕು).
15. ಅಪ್‌ಲೋಡ್ ಮಾಡಿದ ಮಾಹಿತಿಯನ್ನು ಮತ್ತೊಮ್ಮೆ ಪರಿಶೀಲಿಸಿ ಸರಿಯಾಗಿದೆಯೆಂದು ಖಾತರಿಪಡಿಸಿಕೊಂಡ ನಂತರವೇ ಅರ್ಜಿಯನ್ನು SUBMIT ಮಾಡುವುದು.
16. ಅರ್ಜಿ ಸಂಖ್ಯೆ ಹಾಗೂ ಮೊಬೈಲ್ ನಂಬರ್‌ಗಳನ್ನು ಬಳಸಿ ಸ್ವೀಕೃತಿಯನ್ನು ತಂತ್ರಾಂಶದ ಮೂಲಕ ಪಡೆದುಕೊಳ್ಳಬಹುದಾಗಿದೆ.